# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/12/2015 16 ದಿನಾಂಕ: 05.05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಅಂಬಾಡಿ ಶಾರದಮ್ಮ ಗಂಡ ಅಂಬಾಡಿ ಅಂಜಿನಪ್ಪ ವರದಾಪುರ ಗ್ರಾಮ ಹಬೊಹಳ್ಳಿ ತಾಲೂಕು | ಓ ರಾಮಪ್ಪ ತಂದೆ ಸೋಮಪ್ಪ ವರದಾಪುರ ಗ್ರಾಮ ಹಬೊ ಹಳ್ಳಿ ತಾಲೂಕು |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ವರದಾಪುರ | 280ಎ | 2.50 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 280ಎ ವಿಸ್ತೀರ್ಣ 2.50 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್50/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:08.10.2015 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಮನವಿ ಮೇರೆಗೆ ವ್ಯಾಜ್ಯದ ಜಮೀನು ಮೂಲತಃ ಜಿ ಹುಲುಗಪ್ಪ ತಂದೆ ಯಲ್ಲಪ್ಪ ವರದಾಪುರ ಗ್ರಾಮ ಇವರ ಜಮೀನಾಗಿದ್ದು ಸದರಿಯವರು ದಿನಾಂಕ:15.06.2015 ರಂದು ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ 0926/2015-16ರ ಮೂಲಕ ವಾದಿಗಳು ಕ್ರಯಕ್ಕೆ ಪಡೆದಿದ್ದು ಸದರಿ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ ವಾದಿಗಳ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:06.07.2015 ರಂದು ಪ್ರಶ್ನಿತ ಹಕ್ಕುಬದಲಾವಣೆಗೆ ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

ವಾದಿ ಹಾಗೂ ಪ್ರತಿವಾದಿಗಳಿಗೆ ವಿಚಾರಣಾ ನೋಟೀಸ್ ಜಾರಿಯಾಗಿದ್ದರೂ ಸಹ ಉಭಯರು ಸತತವಾಗಿ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ, ಪ್ರಸ್ತುತ ಹಕ್ಕುಬದಲಾವಣೆಗಾಗಿ-

-ಡಯಾಗ್ಲಾಟ್ ಪ್ರತಿ, ಆದಾಯ, ಕ್ರಯದಾರರು ಕೃಷಿಕುಟುಂಬ ಸದಸ್ಯರು ಎಂಬ ಬಗ್ಗೆ ಹಾಗೂ ಇತರೆ ಅವಶ್ಯ ದಾಖಲೆಗಳು ಅತ್ಯಅವಶ್ಯಕವಾಗಿ ಬೇಕಾಗಿರುವುದರಿಂದ ಹಾಗೂ ಉಭಯ ಪಕ್ಷಕಾರರ ಸತತ ಗೈರು ಹಾಜರಾತಿಯಿಂದಾಗಿ ಪ್ರಸ್ತುತ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಉಭಯರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 280ಎ ವಿಸ್ತೀರ್ಣ 2.50 ಎಕರೆ ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುತ್ತಾ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 05.05.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

Office of the Deputy Tahasildar ತಂಬ್ರಹಳ್ಳಿ

05/05

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ.
ಉಪ ತಹಶೀಲ್ದಾರರು, ನಾಡ ಕಛೇರಿ, ತಂಬ್ರಹಳ್ಳಿ.

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.